**ಕರ್ನಾಟಕ ವಿಧಾನ ಸಭೆ**
**(ಹದಿನಾಲ್ಕನೇ ವಿಧಾನ ಸಭೆ)**
**ಹದಿಮೂರನೇ ಅಧಿವೇಶನ**

# ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-3)**

ಕರ್ನಾಟಕ ಶಿಕ್ಷಣ ಅಧಿನಿಯಮ, 1983ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಶಿಕ್ಷಣ ಅಧಿನಿಯಮ, 1983ನ್ನು (1995ರ ಕರ್ನಾಟಕ ಅಧಿನಿಯಮ ಸಂಖ್ಯೆ 1) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಶಿಕ್ಷಣ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 21ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ (1995ರ ಕರ್ನಾಟಕ ಅಧಿನಿಯಮ ಸಂಖ್ಯೆ 1) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 21ನೇ ಪ್ರಕರಣದಲ್ಲಿ (ಡಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"(ಡಿ) ಯಾವುದೇ ಪರೀಕ್ಷೆಗೆ ಸಂಬಂಧಿಸಿದಂತೆ **"ದುರಾಚರಣೆ"** ಎಂದರೆ,-

(i) ಬರೆದ, ಧ್ವನಿ ಮುದ್ರಿಸಿದ, ಬೆರಳಚ್ಚು ಮಾಡಿದ, ಛಾಯಾಚಿತ್ರ ತೆಗೆದ ಅಥವಾ ಮುದ್ರಿಸಿದ ಅಥವಾ ಯಾವುದೇ ವ್ಯಕ್ತಿಯು ರವಾನೆ ಮಾಡಿದ ಅಥವಾ ಯಾವುದೇ ಸಾಮಗ್ರಿಯಿಂದ ಅಥವಾ ಯಾವುದೇ ರೀತಿಯಲ್ಲಿ ಯಾವುದೇ ವ್ಯಕ್ತಿಯಿಂದ ಸಹಾಯವನ್ನು ತೆಗೆದುಕೊಳ್ಳುವುದು ಅಥವಾ ಯಾವೊಬ್ಬ ವ್ಯಕ್ತಿಗೆ ಸಹಾಯ ಮಾಡುವುದು ಅಥವಾ ತೆಗೆದುಕೊಳ್ಳಲು ಅಥವಾ ನೀಡಲು ಪ್ರಯತ್ನಿಸುವುದು; ಮತ್ತು

(ii) ಅರ್ಹತೆಯಲ್ಲದ ಅಂಕಗಳು ಅಥವಾ ಶ್ರೇಣಿಗಳನ್ನು ಪಡೆಯುವ ಸಲುವಾಗಿ ಅಥವಾ ನ್ಯಾಯಮಾರ್ಗದ್ದಲ್ಲದ ಅನುಕೂಲ ಅಥವಾ ಅನಾನುಕೂಲಗಳನ್ನು ಒಬ್ಬ ಅಥವಾ ಹೆಚ್ಚಿನ ಅಭ್ಯರ್ಥಿಗಳಿಗೆ ಕಲ್ಪಿಸುವುದಕ್ಕಾಗಿ ಪರೀಕ್ಷಾ ಅವಧಿಗಿಂತ ಮೊದಲು ಅಥವಾ ಆ ಪರೀಕ್ಷಾ ಸಮಯದಲ್ಲಿ ಅಥವಾ ಪರೀಕ್ಷಾ ಅವಧಿಯ ನಂತರ ಒಬ್ಬ ವ್ಯಕ್ತಿಯು ತಾನೊಬ್ಬನೇ ಅಥವಾ ಇತರ ಯಾವೊಬ್ಬ ವ್ಯಕ್ತಿಯೊಂದಿಗೆ ಮೋಸದ ಒಳಸಂಚಿನಲ್ಲಿ ಯಾವೊಬ್ಬ ವ್ಯಕ್ತಿಯು ಮಾಡುವ ಯಾವುದೇ ಕಾನೂನುಬಾಹಿರ ಕೃತ್ಯ.

(ಇ) ಯಾವುದೇ ಪರೀಕ್ಷೆಯ ಸಂಬಂಧದಲ್ಲಿ 'ಪ್ರಶ್ನೆ ಪತ್ರಿಕೆ' ಎಂದರೆ, ನಿಯಮಿಸಲಾದ ಪಠ್ಯಕ್ರಮದ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಮತ್ತು ಯಾವುದೇ ಪರೀಕ್ಷೆಗಳಲ್ಲಿ ಬಳಸಬೇಕೆಂದು ಉದ್ದೇಶಿಸಿಸಲಾದ ಪ್ರಶ್ನೆಗಳ ಸಮೂಹ ಮತ್ತು ಇದು ಸಕ್ಷಮ ಪ್ರಾಧಿಕಾರದ ಸ್ವತ್ತಾಗಿರತಕ್ಕದ್ದು".

**2. 23ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 23ನೇ ಪ್ರಕರಣದ (ಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಡಿ) ಉತ್ತರ ಪತ್ರಿಕೆಯ ಮೌಲ್ಯಮಾಪನ ಅಥವಾ ಮೌಲ್ಯಮಾಪನದ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಯಾರಿಗೆ ವಹಿಸಲಾಗಿದೆಯೋ ಆತನು,–

(i) ಸಕ್ಷಮ ಪ್ರಾಧಿಕಾರವು ನಿಯಮಿಸಿದ ಮೌಲ್ಯಮಾಪನ ಸ್ಕೀಮಿನ ಉಲ್ಲಂಘನೆಯಲ್ಲಿ ಮೌಲ್ಯಮಾಪನ ಅಥವಾ ಮೇಲ್ವಿಚಾರಣೆಯನ್ನು ಕೈಗೊಳ್ಳತಕ್ಕದ್ದಲ್ಲ; ಅಥವಾ

(ii) ಸಕ್ಷಮ ಪ್ರಾಧಿಕಾರವು ನಿಯಮಿಸಿದ ರೀತಿಯಲ್ಲಿ ಮೌಲ್ಯಮಾಪನ ಅಥವಾ ಮೇಲ್ವಿಚಾರಣೆಯನ್ನು ಕೈಗೊಳ್ಳದಿರುವಂತೆ ಪರೀಕ್ಷಾ ಕೆಲಸವನ್ನು ವಹಿಸಿಕೊಂಡಿರುವ ಇತರ ವ್ಯಕ್ತಿಗಳನ್ನು ಪ್ರಚೋದಿಸತಕ್ಕದ್ದಲ್ಲ."

**4. 24ಎ ಹೊಸ ಪ್ರಕರಣದ ಸೇರ್ಪಡೆ.–** ಮೂಲ ಅಧಿನಿಯಮದ 24ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**24ಎ. ಪ್ರಶ್ನೆ ಪತ್ರಿಕೆ ಸೋರಿಕೆಯ ನಿಷೇಧ.–** ಯಾವೊಬ್ಬ ವ್ಯಕ್ತಿಯು, ಪರೀಕ್ಷೆಗೆ ಮೊದಲು ಅಥವಾ ಪರೀಕ್ಷೆ ನಡೆಯುವ ಅವಧಿಯಲ್ಲಿ,–

(i) ಯಾವುದೇ ಪರೀಕ್ಷೆಯಲ್ಲಿ ಬಳಸಲು ಉದ್ದೇಶಿಸಲಾಗಿರುವ ಯಾವುದೇ ಪ್ರಶ್ನೆ ಪತ್ರಿಕೆಯನ್ನು ಕೊಳ್ಳುವುದು, ಮಾರುವುದು ಅಥವಾ ಸಂಗ್ರಹಿಸುವುದು ಅಥವಾ ಹಾಗೆ ಮಾಡುವುದಕ್ಕೆ ಪ್ರಯತ್ನಿಸುವುದು ಅಥವಾ ಅನ್ಯಥಾ; ಅಥವಾ

(ii) ಯಾವುದೇ ಪರೀಕ್ಷೆಯಲ್ಲಿ ಬಳಸಲು ಉದ್ದೇಶಿಸಲಾಗಿರುವ ಯಾವುದೇ ಪ್ರಶ್ನೆ ಪತ್ರಿಕೆಯನ್ನು ಹೊಂದಿರುವುದು ಅಥವಾ ಸಂಗ್ರಹಿಸುವುದು ಅಥವಾ ತನಗೆ ಅಥವಾ ಯಾವೊಬ್ಬ ಇತರ ವ್ಯಕ್ತಿಗೆ ಕೊಡುವಂತೆ ಮನವೊಲಿಸುವುದು ಅಥವಾ ಹಾಗೆ ಮಾಡುವಂತೆ ಪ್ರಯತ್ನಿಸುವುದು,

– ಈ ಮೂಲಕ ಪ್ರಶ್ನೆ ಪತ್ರಿಕೆಯ ಸೋರಿಕೆಯನ್ನು ಉಂಟುಮಾಡತಕ್ಕದ್ದಲ್ಲ ಅಥವಾ ದುರಾಚರಣೆಯಲ್ಲಿ ತೊಡಗತಕ್ಕದ್ದಲ್ಲ.

**ವಿವರಣೆ:–** ಈ ಖಂಡದ ಉದ್ದೇಶಕ್ಕಾಗಿ "ಪ್ರಶ್ನೆ ಪತ್ರಿಕೆ ಸೋರಿಕೆ"ಯು ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆಯದೇ ಕೈಗೊಳ್ಳಲಾದ ಅಥವಾ ಕೈಗೊಳ್ಳಲು ಪ್ರಯತ್ನಿಸಲಾದ ಈ ಮುಂದಿನ ಯಾವುವೇ ಪ್ರಕ್ರಿಯೆಯನ್ನು ಒಳಗೊಳ್ಳುತ್ತದೆ, ಎಂದರೆ:–

(ಎ) ಮುದ್ರಿಸುವುದು;

(ಬಿ) ಫೋಟೊ ಕಾಪಿ ಮಾಡುವುದು;

(ಸಿ) ಛಾಯಾಚಿತ್ರ ತೆಗೆಯುವುದು;

(ಡಿ) ಕೈ ಬರವಣಿಗೆ ಅಥವಾ ಬ್ರೈಲ್ ನಮೂನೆಯಲ್ಲಿ; ಅಥವಾ

(ಇ) ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000ರಲ್ಲಿ (2000ರ ಕೇಂದ್ರ ಅಧಿನಿಯಮ 21) ಪರಿಭಾಷಿಸಲಾದಂತೆ ಯಾವುದೇ ಸಂಪರ್ಕ ಸಾಧನ ಅಥವಾ ಕಂಪ್ಯೂಟರ್ ಜಾಲತಾಣದ ಮೂಲಕ ಯಾವುದೇ ಪಠ್ಯದ ವಿಡಿಯೊ(ದೃಶ್ಯ), ಆಡಿಯೋ (ಶ್ರವಣ) ಅಥವಾ ಇಮೇಜ್ (ಛಾಯೆ) ಅನ್ನು ತಿಳಿಸುವುದು, ಕಳುಹಿಸುವುದು ಅಥವಾ ರವಾನಿಸುವುದು."

**5. 115ನೇ ಪ್ರಕರಣದ ಪ್ರತಿಯೋಜನೆ.–** ಮೂಲ ಅಧಿನಿಯಮದ 115ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"**115. 23ನೇ ಪ್ರಕರಣ ಅಥವ 24ಎ ಪ್ರಕರಣದ ಉಲ್ಲಂಘನೆಗಾಗಿ ದಂಡ.–** 23ನೇ ಪ್ರಕರಣ ಅಥವಾ 24ಎ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ, ಐದು ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು."

**6. 118ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 118ನೇ ಪ್ರಕರಣದಲ್ಲಿ "ಒಂದು ನೂರು ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳಿಗೆ "ಹತ್ತು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**7. 121ಎ ಹೊಸ ಪ್ರಕರಣದ ಸೇರ್ಪಡೆ.–** ಮೂಲ ಅಧಿನಿಯಮದ 121ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

**"121ಎ. ಮಂಡಳಿ ಅಥವಾ ಇಲಾಖೆ ಅಥವಾ ಪ್ರಾಧಿಕಾರದ ಅಧಿಕಾರ.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಪರೀಕ್ಷೆಯನ್ನು ನಡೆಸುವ ಯಾವುದೇ ಮಂಡಳಿ ಅಥವಾ ಇಲಾಖೆ ಅಥವಾ ಪ್ರಾಧಿಕಾರವು ಈ ಮುಂದಿನ, ಎಂದರೆ:–

(i) ಅಭ್ಯರ್ಥಿಯು ಯಾವುದೇ ರೀತಿಯ ದುರಾಚರಣೆಯಲ್ಲಿ ತೊಡಗಿದ್ದಾನೆಂದು ಅದು ಮನಗಂಡರೆ, ಅಭ್ಯರ್ಥಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ಅಭ್ಯರ್ಥಿಯ ಫಲಿತಾಂಶವನ್ನು ತಡೆಹಿಡಿಯುವುದು, ಅಮಾನತ್ತಿನಲ್ಲಿಡುವುದು ಅಥವಾ ರದ್ದುಗೊಳಿಸುವುದು ಅಥವಾ ಮೂರು ವರ್ಷಗಳವರೆಗೆ ತನ್ನ ಪರೀಕ್ಷೆಯನ್ನು ತೆಗೆದುಕೊಳ್ಳುವುದರಿಂದ ಆತನನ್ನು ಉಚ್ಚಾಟಿಸುವ (ಡಿಬಾರ್);

(ii) ಶಾಲೆ ಅಥವಾ ಪದವಿ ಪೂರ್ವ ಕಾಲೇಜು ಅಥವಾ ಪರೀಕ್ಷಾ ಕೇಂದ್ರವು ಯಾವುದೇ ರೀತಿಯ ದುರಾಚರಣೆಯಲ್ಲಿ ತೊಡಗಿದೆ ಎಂದು ಅದು ಮನಗಂಡರೆ, ಶಾಲೆ ಅಥವಾ ಪದವಿ ಪೂರ್ವ ಕಾಲೇಜು ಅಥವಾ ಪರೀಕ್ಷಾ ಕೇಂದ್ರಕ್ಕೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ಶಾಲೆ ಅಥವಾ ಪದವಿ ಪೂರ್ವ ಕಾಲೇಜು ಅಥವಾ ಪರೀಕ್ಷಾ ಕೇಂದ್ರದ ಮಾನ್ಯತೆಯನ್ನು ಮೂರು ವರ್ಷಗಳ ಅವಧಿಯವರೆಗೆ ಅಮಾನತ್ತಿನಲ್ಲಿಡಲು ಅಥವಾ ಹಿಂಪಡೆಯಲು ಶಿಫಾರಸ್ಸು ಮಾಡುವ,

– ಅಧಿಕಾರಗಳನ್ನು ಹೊಂದಿರತಕ್ಕದ್ದು."

**8. 122ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 122ನೇ ಪ್ರಕರಣದಲ್ಲಿ "ಒಂದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳಿಗೆ "ಹತ್ತು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

# ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪರೀಕ್ಷಾ ಅವಧಿಯಲ್ಲಿ ಪ್ರಶ್ನೆ ಪತ್ರಿಕೆಗಳ ಸೋರಿಕೆಯನ್ನು ನಿಲ್ಲಿಸುವ ಮತ್ತು ಪರೀಕ್ಷೆಯ ಅಥವಾ ಮೌಲ್ಯಮಾಪನದ ಅವಧಿಯಲ್ಲಿ ವಿದ್ಯಾರ್ಥಿಗಳು ಹಾಗೂ ಇತರರು ಮಾಡುವ ದುರಾಚರಣೆಯನ್ನು ತೊಡೆದುಹಾಕುವ ಉದ್ದೇಶದೊಂದಿಗೆ, ದುರಾಚರಣೆಗಳನ್ನು ತಡೆಯುವುದಕ್ಕಾಗಿ ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಉಪಬಂಧಗಳನ್ನು ಬಲಪಡಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ಸಮಿತಿಯು ಶಿಫಾರಸ್ಸು ಮಾಡಿದೆ. ಆದುದರಿಂದ ಈ ಮುಂದಿನ ಉಪಬಂಧಗಳನ್ನು ಕಲ್ಪಿಸುವುದಕ್ಕಾಗಿ ಸದರಿ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ:-

(ಎ) **"ದುರಾಚರಣೆ"** ಪದವನ್ನು ವಿಸ್ತರಿಸುವುದು;

(ಬಿ) **"ಪ್ರಶ್ನೆ ಪತ್ರಿಕೆ"** ಪದವನ್ನು ಪರಿಭಾಷಿಸುವುದು;

(ಸಿ) ದುರಾಚರಣೆಯನ್ನು ನಿಷೇಧಿಸುವುದು;

(ಡಿ) ಪ್ರಶ್ನೆ ಪತ್ರಿಕೆ ಸೋರಿಕೆಯನ್ನು ನಿಷೇಧಿಸುವುದು ಮತ್ತು ಅದಕ್ಕೆ ದಂಡಗಳನ್ನು ವಿಧಿಸುವುದು;

(ಇ) ಕೆಲವು ದಂಡಗಳನ್ನು ಹೆಚ್ಚಿಸುವುದು;

(ಎಫ್) ದುರಾಚರಣೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳನ್ನು ಉಚ್ಚಾಟಿಸಲು (ಡಿಬಾರ್) ಮತ್ತು ಅಂಥ ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ಅಮಾನತ್ತುಗೊಳಿಸುವಂತೆ ಅಥವಾ ಹಿಂಪಡೆಯುವಂತೆ ಶಿಫಾರಸ್ಸು ಮಾಡಲು ಪರೀಕ್ಷಾ ಮಂಡಳಿ ಅಥವಾ ಇಲಾಖೆ ಅಥವಾ ಪ್ರಾಧಿಕಾರಕ್ಕೆ ಅಧಿಕಾರವನ್ನು ನೀಡುವುದು; ಮತ್ತು

(ಜಿ) ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಕೂಡಾ ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತ ಜ್ಞಾಪನ ಪತ್ರ**

| | |
|---|---|
| **ಖಂಡ 23** | (i) 3ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಿರುವ 23ನೇ ಪ್ರಕರಣದ (ಡಿ) ಖಂಡದ (i)ನೇ ಬಾಬುವು ಮೌಲ್ಯಮಾಪನದ ಸ್ಕೀಮುಗಳನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(ii) 3ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಿರುವ 23ನೇ ಪ್ರಕರಣದ (ಡಿ) ಖಂಡದ (ii)ನೇ ಬಾಬುವು ಮೌಲ್ಯಮಾಪನದ ಮೇಲ್ವಿಚಾರಣೆಯ ವಿಧಾನವನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ತನ್ವೀರ್ ಸೇಠ್**
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

**ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ (1995ರ ಕರ್ನಾಟಕ ಅಧಿನಿಯಮ ಸಂಖ್ಯೆ 1) ಉದ್ಧೃತ ಭಾಗ**

**XX XX XX**

**21. ಪರಿಭಾಷೆಗಳು.–** ಈ ಅಧ್ಯಾಯದಲ್ಲಿ, 22ನೇ ಪ್ರಕರಣವನ್ನು ಹೊರತುಪಡಿಸಿ,–

**XX XX XX**

(ಡಿ) ಯಾವುದೇ ಪರೀಕ್ಷೆಗೆ ಸಂಬಂಧಿಸಿದಂತೆ "ದುರಾಚರಣೆ" ಎಂದರೆ ಬರೆದ, ಧ್ವನಿ ಮುದ್ರಿಸಿದ, ಬೆರಳಚ್ಚು ಮಾಡಿದ ಅಥವಾ ಮುದ್ರಿಸಿದ ಯಾವುದೇ ಸಾಮಗ್ರಿಯಿಂದ ಅಥವಾ ಯಾವುದೇ ರೀತಿಯಲ್ಲಿ ಯಾವುದೇ ವ್ಯಕ್ತಿಯಿಂದ ಸಹಾಯವನ್ನು ತೆಗೆದುಕೊಳ್ಳುವುದು ಅಥವಾ ಯಾವನೇ ವ್ಯಕ್ತಿಗೆ ಸಹಾಯ ಮಾಡುವುದು ಅಥವಾ ತೆಗೆದುಕೊಳ್ಳಲು ಅಥವಾ ನೀಡಲು ಪ್ರಯತ್ನಿಸುವುದು.

**XX XX XX**

**23. ಪರೀಕ್ಷಾ ಕೆಲಸವನ್ನು ವಹಿಸಿಕೊಡಲಾದ ಕೆಲವು ವ್ಯಕ್ತಿಗಳ ಕರ್ತವ್ಯಗಳು.– XX XX XX**

(ಸಿ) ಯಾವುದೇ ಪರೀಕ್ಷೆಯ ಉದ್ದೇಶಕ್ಕಾಗಿ ಸಿದ್ಧಪಡಿಸಲಾದ ಯಾವುದೇ ಪ್ರಶ್ನೆಪತ್ರಿಕೆಯ ಅಭಿರಕ್ಷೆಯನ್ನು ವಹಿಸಲಾಗಿರುವ ಅಥವಾ ಅನ್ಯಥಾ ಅವುಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ವ್ಯಕ್ತಿಯು, ಅವುಗಳ ಅಭಿರಕ್ಷೆಯನ್ನು ಅಥವಾ ಸ್ವಾಧೀನತೆಯನ್ನು ಅವನಿಗೆ ವಹಿಸಿಕೊಟ್ಟ ಪ್ರಾಧಿಕಾರದ ಲಿಖಿತ ಸೂಚನೆಗಳಿಗೆ ಅನುಸಾರವಾಗಿ ಹೊರತು, ಯಾವ ವ್ಯಕ್ತಿಗೂ ಅದರ ಪ್ರತಿಯನ್ನು ಒದಗಿಸತಕ್ಕುದಲ್ಲ ಅಥವಾ ಹಂಚತಕ್ಕುದಲ್ಲ ಅಥವಾ ಒದಗಿಸುವಂತೆ ಅಥವಾ ಹಂಚುವಂತೆ ಮಾಡತಕ್ಕುದಲ್ಲ ಅಥವಾ ಅದರ ಒಳಾಂಶವನ್ನು ತಿಳಿಸತಕ್ಕುದಲ್ಲ ಅಥವಾ ಯಾವುದೇ ರೀತಿಯಲ್ಲಿ ಅದಕ್ಕೆ ಪ್ರಚಾರ ನೀಡತಕ್ಕುದಲ್ಲ.

**XX XX XX**

**115. 23ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ.–** 23ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

**XX XX XX**

**118. ಪರೀಕ್ಷೆಗಳಲ್ಲಿ ಇತರರಂತೆ ನಟಿಸಿ ಹಾಜರಾಗಿದ್ದಕ್ಕೆ ದಂಡನೆ.–** 25ನೇ ಪ್ರಕರಣದ ಉಪಂಬಂಧಗಳ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಒಂದು ನೂರು ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

**XX XX XX**

**122. 28ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ.–** ಯಾವುದೇ ಪರೀಕ್ಷೆಗೆ ಸಂಬಂಧಿಸಿದ ಮತ್ತು ಅವನಿಗೆ ವಹಿಸಿಕೊಡಲಾದ ಯಾವುದೇ ಕೆಲಸವನ್ನು ಮಾಡಲು ಯುಕ್ತ ಕಾರಣಗಳಿಲ್ಲದೆ ನಿರಾಕರಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ , 1000–ಪ್ರತಿಗಳು 7ನೇ ಫೆಬ್ರವರಿ, 2017, ಕಾ.ಸೂ.

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**THIRTEENTH SESSION**

# THE KARNATAKA EDUCATION (AMENDMENT) BILL, 2017
**(L.A. Bill No. 3 of 2017)**

A Bill further to amend the Karnataka Education Act, 1983

Whereas it is expedient further to amend the Karnataka Education Act, 1983 (Karnataka Act 1 of 1995) for the purposes hereinafter appearing;

Be it enacted by the Karnataka State Legislature in the sixty eighth year of the Republic of India, as follows:-

**1. Short title and commencement.-** (1) This Act may be called the Karnataka Education (Amendment) Act, 2017.

(2) It shall come into force at once.

**2. Amendment of section 21.-** In the Karnataka Education Act, 1983 (Karnataka Act 1 of 1995) (hereafter referred to as the principal Act), in section 21, for clause (d), the following shall be substituted, namely:-

“(d) "malpractice" in relation to any examination means,-

(i) taking or giving or attempting to take or give any help from or to any person or from any material, written, recorded, typed, photographed or printed or transmitted from any person, in any form whatsoever; and

(ii) any illegal act committed by a person individually or in collusion with any other person before, during or after examination hours in order to obtain undeserved marks or grades or to place one or more candidates at an unfair advantage or disadvantage.

(e) "Question paper" in relation to any examination means a set of questions related with specified topics of prescribed syllabus and intended to be used at any examination, and which shall be property of the competent authority."

**3. Amendment of section 23.-** In section 23 of the principal Act, after clause (c), the following shall be inserted, namely:-

"(d) who is entrusted with evaluation of answer scripts or supervision of the evaluation shall,-

(i) carry out the evaluation or supervision in contravention of the scheme of evaluation prescribed by the competent authority; or

(ii) instigate other persons entrusted with examination work not to carry out or supervise the evaluation in the manner prescribed by the competent authority."

**4. Insertion of new section 24A.-** After section 24 of the principal Act, the following shall be inserted, namely:-

**"24A. Prohibition of leakage of question paper.-** No person shall, before or during examination cause leakage of question paper or indulge in malpractice by,-

(i) buying, selling or procuring or attempting to do so or otherwise dealing with any question paper intended for use at any examination; or

(ii) possessing or procuring or inducing any other person to deliver him or any other person any question paper or attempting to do so intended for use at any examination,

**Explanation**.- For the purpose of this clause "Leakage of a question paper" includes any of the following process carried out or attempting to carry out without approval of the competent authority, namely:-

(a) Printing;

(b) Photocopying;

(c) Photographing;

(d) Writing by hand or in brail form; or

(e) Communicating, sending or transmitting any text vedio, audio or image through any communication device or computer network as defined in the Information Technology Act, 2000 (Central Act 21 of 2000)."

**5. Substitution of section 115.-** For section 115 of the principal Act, the following shall be substituted, namely:-

**"115. Penalty for contravention of section 23 or section 24A.-** Any person who contravenes the provisions of section 23 or section 24A shall on conviction, be punished with imprisonment for a term which may extend to five years or with fine which may extend to five lakhs rupees or with both."

**6. Amendment of section 118.-** In section 118 of the principal Act, for the words "five thousand rupees but not less than one hundred rupees", the words "ten thousand rupees" shall be substituted.

**7. Insertion of new section 121A-** After section 121 of the principal Act, the following shall be inserted, namely:-

**"121A. Power of the Board or Department or Authority.-** Notwithstanding anything contained in this Act, Board or Department or Competent Authority conducting examination shall have the power to,-

(i) Withhold, suspend or cancel the result of a candidate or debar a candidate from taking its examination for up to three years if it is satisfied that the candidate has engaged in any form of malpractice after giving the candidate an opportunity of being heard;

(ii) recommend for suspension or withdrawal of recognition of a school or Pre-university College or an examination centre for upto three year, if it is satisfied that the school or Pre-university College or examination centre is involved in any form of malpractice after giving the school or Pre university college an opportunity of being heard."

**8. Amendment of section 122.-** In section 122 of the principal Act, for the words "one thousand rupees", the words "ten thousand rupees" shall be substituted.

**STATEMENT OF OBJECTS AND REASONS**

With an object to stop leakage of question papers during examination and to eradicate malpractices by the students and others during examination or evaluation, a committee headed by Additional Chief Secretary to Government has recommended to strengthen the provisions of the Karnataka Education Act, 1983 to prevent malpractices. Therefore, it is considered necessary further to amend the said Act to provide for,-

(a) expansion of the term "malpractice";

(b) definition of the term "question paper";

(c) prohibition of malpractice;

(d) prohibition of leakage of question paper and penalties thereto;

(e) enhancement of certain penalties;

(f) empowering the examination Board or Department or Authority to debar students and to recommend for suspension or withdrawal of recognition of such Education institutions indulge in malpractices; and

(g) certain consequential amendments are also proposed.

Hence, the Bill.

**FINANCIAL MEMORANDUM**

There is no extra expenditure involved in the proposed Legislative measure.

## MEMORANDUM REGARDING DELEGATED LEGISLATION

Clause 23: (i) item (i) of clause (d) of section 23 proposed to be inserted by clause 3 empowers the State Government to prescribe by rules the scheme of evaluation.

(ii) item (ii) of clause (d) of section 23 proposed to be inserted by clause 3 empowers the State Government to prescribe by rules the manner of supervising evaluation.

The proposed delegation of Legislative power is normal in character.

**Tanveer Sait**
Minister for Primary and
Secondary Education

**S.Murthy**
Secretary (I/C)
Karnataka Legislative Assembly

# ANNEXURE

## EXTRACT FROM THE KARNATAKA EDUCATION ACT, 1983
## (KARNATAKA ACT 1 OF 1995)

**XXX** **XXX** **XXX**

**21. Definitions**.- In this Chapter except in section 22,-

**XXX** **XXX** **XXX**

(d) "malpractice" in relation to any examination means taking or giving or attempting to take or give any help from or to any person or from any material, written, recorded, typed or printed or from any person, in any form whatsoever.

**XXX** **XXX** **XXX**

**23. Duties of certain persons entrusted with the examination work.**- No person,

**XXX** **XXX** **XXX**

(c) who is entrusted with the custody, or is otherwise in possession of any question paper set for the purposes of any examination shall supply or distribute or cause to be supplied or distributed any copy thereof or communicate the contents thereof to any person or give publicity thereto in any manner, except in accordance with the instructions given to him in writing by the authority which entrusted the custody or give possession thereof to him.

**XXX** **XXX** **XXX**

**115. Penalty for contravention of section 23.**- Any person who contravenes the provisions of section 23 shall on conviction, be punished with imprisonment for a term which may extend to six months or with fine which may extend to one thousand rupees or with both.

**XXX** **XXX** **XXX**

**118. Penalty for impersonating at examinations.**- Any person who contravenes the provisions of section 25 shall be punished with

imprisonment for a term which may extend to one year or with fine which may extend to five thousand rupees but not less than one hundred rupees or with both.

xxx xxx xxx

**122. Punishment for contravention of section 28.**- Any person, who, without reasonable excuse, refuses to do any work connected with any examination and assigned to him, shall, on conviction, be punished with imprisonment for a term which may extend to one year or with fine which may extend to one thousand rupees or with both.

xxx xxx xxx

Government Press, Vikasa Soudha Unit, Bengaluru 7st february, 2017 P7, W.D., Copies 1000